# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಪ್ರಕರಣಗಳ ಪತ್ತೆ ಕಾರ್ಯದಲ್ಲಿ **ಅಸಾಧಾರಣ ಫಲಿತಾಂಶ** ತೋರಿದವರಿಗೆ ಶ್ಲಾಘನೆ ಹಾಗೂ ಬಹುಮಾನ ನೀಡುವ ಬಗ್ಗೆ.

ಓದಲಾಗಿದೆ: ಐಜಿಪಿ(ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ಕವಿಪ್ರನಿನಿ ಮತ್ತು ಎಸ್ಕಾಂಗಳು ರವರ ಕಡತ ಸಂಖ್ಯೆ: ಐಜಿಪಿ/ವಿ&ಇ/80/2008-09 ರಲ್ಲಿ ಪ್ರಸ್ತಾವನೆ.

* * *

**ಪ್ರಸ್ತಾವನೆ:-**

ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್), ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಇವರು ಮೇಲೆ ಓದಲಾಗಿರುವ ಕಡತದಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ:-

1. ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆಗುತ್ತಿರುವ ಪ್ರಸರಣ ಮತ್ತು ವಿತರಣಾ ನಷ್ಟದಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗವು ಮಹತ್ವದ ಅಂಶವಾಗಿರುತ್ತದೆ. ರಾಜ್ಯದಲ್ಲಿ ಪ್ರಸರಣ ಮತ್ತು ವಿತರಣಾ ನಷ್ಟವನ್ನು, ವಿದ್ಯುತ್ ಕಳ್ಳತನ ಸೋರಿಕೆ ಮತ್ತು ದುರುಪಯೋಗವನ್ನು ಕಡಿಮೆಗೊಳಿಸಲು ಸರ್ಕಾರ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಬದ್ಧವಾಗಿರುತ್ತದೆ.

2. ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ವಿರುದ್ಧ ತೀವ್ರತರವಾದ ಕಾರ್ಯಾಚರಣೆಯನ್ನು ಕೈಗೆತ್ತಿಕೊಂಡಿದ್ದು, ಈ ಕಾರ್ಯಾಚರಣೆಯು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್), ಕವಿಪ್ರನಿನಿ ಮತ್ತು ಎಸ್ಕಾಂಗಳು ರವರ ನೇರ ಉಸ್ತುವಾರಿ ಮತ್ತು ನಿಯಂತ್ರಣದಲ್ಲಿ ನಡೆಸಲಾಗುತ್ತಿದೆ. ಎಸ್ಕಾಂಗಳ ಕಾರ್ಯ ಮತ್ತು ಪಾಲನಾ, ಎಂ.ಟಿ ಮತ್ತು ಜಾಗೃತದಳ ಘಟಕಗಳ ಅಧಿಕಾರಿ ಮತ್ತು ಸಿಬ್ಬಂದಿ ಗಳನ್ನೊಳಗೊಂಡ ವಿಶೇಷ ತಪಾಸಣಾ ತಂಡಗಳು ವಿದ್ಯುತ್ ಸ್ಥಾವರಗಳ ತೀವ್ರತರವಾದ ಲೆವೆಲ್-1 (ಮುಖ್ಯ ಇಂಜಿನಿಯರ್‌ಗಳು), ಲೆವೆಲ್-2(ಅಧೀಕ್ಷಕ ಇಂಜಿನಿಯರ್/ಕಾರ್ಯನಿರ್ವಾಹಕ ಇಂಜಿನಿಯರ್‌ಗಳು), ಲೆವೆಲ್-3 (ಎಂ.ಟಿ) ಮತ್ತು ಲೆವೆಲ್-4 (ಜಾಗೃತದಳ) ತಪಾಸಣೆಗಳನ್ನು ನಡೆಸಲಾಗುತ್ತಿದೆ.

3. 20007-08 ನೇ ಸಾಲಿನ ಅಕ್ಟೋಬರ್ ರಿಂದ ಜನವರಿ ಮತ್ತು 2008-09ನೇ ಸಾಲಿನ ಅಕ್ಟೋಬರ್ ನಿಂದ ಜನವರಿವರೆಗೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಡೆಸಲಾಗಿರುವ ಜಾಗೃತದಳ ಕಾರ್ಯ ಚಟುವಟಿಕೆ ಕುರಿತಾದ ವಿವರಗಳ ಹೋಲಿಕೆ ಪಟ್ಟಿಯು ಕೆಳಕಂಡಂತಿರುತ್ತವೆ :-

| ಕ್ರಮ ಸಂಖ್ಯೆ | ತಿಂಗಳು | ತಪಾಸಣೆ ನಡೆಸಲಾದ ಸ್ಥಾವರಗಳ ಸಂಖ್ಯೆ | | ಪತ್ತೆ ಮಾಡಲಾದ ಪ್ರಕರಣಗಳ ಸಂಖ್ಯೆ | | ವಿಧಿಸಲಾದ ದಂಡ (ರೂ. ಕೋಟಿಗಳಲ್ಲಿ) | |
|---|---|---|---|---|---|---|---|
| | | **2007-08** | **2008-09** | **2007-08** | **2008-09** | **2007-08** | **2008-09** |
| 1 | ಅಕ್ಟೋಬರ್ | 7579 | 4831 | 1245 | 1223 | 2.50 | 2.65 |
| 2 | ನವೆಂಬರ್ | 7656 | 14880 | 1485 | 2677 | 2.63 | 4.89 |
| 3 | ಡಿಸೆಂಬರ್ | 7807 | 69009 | 1590 | 6844 | 2.59 | 8.18 |
| 4 | ಜನವರಿ | 7891 | 65663 | 1576 | 8410 | 2.61 | 12.57 |
| ಒಟ್ಟು | | **30933** | **154383** | **5896** | **19154** | **10.33** | **28.29** |

4. 2008-09ನೇ ಸಾಲಿನ ಅಕ್ಟೋಬರ್ ನಿಂದ ಜನವರಿ ಅವಧಿಯಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ವಿರುದ್ಧ ನಡೆಸಲಾದ ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್‌ನ ಕಾರ್ಯಾಚರಣೆಯನ್ನು ಕಳೆದ ಸಾಲಿನ ಅವಧಿ ಅಂದರೆ 2007-08ನೇ ಸಾಲಿನ ಅಕ್ಟೋಬರ್ ರಿಂದ ಜನವರಿ ಅವಧಿಗೆ ಹೋಲಿಸಿದಲ್ಲಿ ವಿದ್ಯುತ್ ಕಳ್ಳತನ,ಸೋರಿಕೆ ಮತ್ತು ದುರುಪಯೋಗ ಪ್ರಕರಣಗಳಲ್ಲಿ ವಿಧಿಸಲಾದ ರೂ.17.96 ಕೋಟಿ ದಂಡದಿಂದ, ವಿವಿಧ ಎಸ್ಕಾಂಗಳಿಗೆ ಪ್ರಮುಖವಾಗಿ ಹೆಚ್ಚುವರಿ ಕಂದಾಯವು ದೊರಕುತ್ತಿದೆ.

....2

5. ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಾಲ್ಕು ತಿಂಗಳಲ್ಲಿ (2007-08ನೇ ಸಾಲಿನ ಅಕ್ಟೋಬರ್ 2007 ರಿಂದ ಜನವರಿ 2008 ಮತ್ತು 2008-09ನೇ ಸಾಲಿನ ಅಕ್ಟೋಬರ್ 2008 ರಿಂದ ಜನವರಿ 2009 ರ ಅವಧಿ) ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ವಿರುದ್ಧ ವಿಧಿಸಲಾಗಿರುವ ದಂಡದ ವಿವರಗಳ ಹೋಲಿಕೆಯು ಕೆಳಕಂಡಂತಿರುತ್ತದೆ:-

| ವಿದ್ಯುತ್ ಸರಬರಾಜು ಕಂಪನಿಯ ಹೆಸರು | ಅಕ್ಟೋಬರ್/ನವೆಂಬರ್/ ಡಿಸೆಂಬರ್ 2007ಮತ್ತು ಜನವರಿ 2008 ರಲ್ಲಿ ವಿಧಿಸಲಾದ ದಂಡ (ರೂ.ಗಳು ಕೋಟಿಯಲ್ಲಿ) | ಅಕ್ಟೋಬರ್/ನವೆಂಬರ್/ ಡಿಸೆಂಬರ್ 2008ಮತ್ತು ಜನವರಿ 2009 ರಲ್ಲಿ ವಿಧಿಸಲಾದ ದಂಡ (ರೂ.ಗಳು ಕೋಟಿಯಲ್ಲಿ) | ವ್ಯತ್ಯಾಸ (ರೂ.ಗಳು ಕೋಟಿಯಲ್ಲಿ) |
|---|---|---|---|
| ಬೆಸ್ಕಾಂ | 5.49 | 14.43 | 8.94 |
| ಹೆಸ್ಕಾಂ | 2.59 | 7.61 | 5.02 |
| ಜೆಸ್ಕಾಂ | 1.04 | 2.63 | 1.59 |
| ಮೆಸ್ಕಾಂ | 0.57 | 0.74 | 0.17 |
| ಸೆಸ್ಕ್ | 0.64 | 2.88 | 2.24 |
| **ಒಟ್ಟು** | **10.33** | **28.29** | **17.96** |

6. ಮೇಲಿನ ವಿವರಗಳಿಂದ ಸ್ಪಷ್ಟವಾಗುವುದೇನೆಂದರೆ, ಕಳೆದ ನಾಲ್ಕು ತಿಂಗಳುಗಳಲ್ಲಿ ಪ್ರತಿಯೊಂದು ವಿದ್ಯುತ್ ಸರಬರಾಜು ಕಂಪನಿಯು ಪ್ರಮುಖವಾಗಿ ಹೆಚ್ಚುವರಿ ಕಂದಾಯದಿಂದ ಲಾಭವನ್ನು ಹೊಂದಿರುತ್ತದೆ. ಈ ಸಾಧನೆಯಿಂದ ಕಾರ್ಯ ಮತ್ತು ಪಾಲನಾ, ಎಂ.ಟಿ ಮತ್ತು ಜಾಗೃತದಳದ ಕ್ಷೇತ್ರ ಸಿಬ್ಬಂದಿಗಳು ಸೂಕ್ತ ರೀತಿಯಲ್ಲಿ ಶ್ಲಾಘನೆ ಮತ್ತು ಬಹುಮಾನಕ್ಕಾಗಿ ಅರ್ಹರಿರುತ್ತಾರೆ. ಆದಕಾರಣ, ಈ ಬಗ್ಗೆ ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್), ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು, ಇವರು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಕಳ್ಳತನ ಸೋರಿಕೆ ಮತ್ತು ದುರುಪಯೋಗ ಪ್ರಕರಣಗಳ ದಾಖಲಾತಿಯಲ್ಲಿ ಮತ್ತು ಪತ್ತೆಯಲ್ಲಿ ಮಿಗಲಾದ ಕಾರ್ಯಧಕ್ಷತೆ ತೋರಿದಂತಹ ಅಧಿಕಾರಿ/ನೌರರನ್ನು ಗುರುತಿಸುವ ಮತ್ತು ಶ್ಲಾಘಿಸುವ ಸಂಬಂಧ ಕಳುಹಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ :-

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 13 ಇಇಬಿ 2009,**
**ಬೆಂಗಳೂರು, ದಿನಾಂಕ: 23.3.2009.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಸಂದರ್ಭಗಳಿಗನುಸಾರ, ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣಗಳ ದಾಖಲಾತಿಯಲ್ಲಿ ಮತ್ತು ಪತ್ತೆಯಲ್ಲಿ ಮಿಗಿಲಾದ ಕಾರ್ಯಧಕ್ಷತೆ ತೋರಿದಂತಹ ಅಧಿಕಾರಿಗಳನ್ನು/ನೌಕರರನ್ನು 'ಗುರುತಿಸುವ ಮತ್ತು ಶ್ಲಾಘಿಸುವ' ಬಗ್ಗೆ ಕೆಳಕಂಡ ಪ್ರಕ್ರಿಯೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ಅನುಸರಿಸಲು ಅನುಮೋದನೆ ನೀಡಲಾಗಿದೆ :-

**ಅ) ಎಸ್ಕಾಂಗಳ ಕಾರ್ಯ ಮತ್ತು ಪಾಲನಾ ಘಟಕದವರಿಗೆ ಶ್ಲಾಘನೆ ಮತ್ತು ಬಹುಮಾನ:-**

1) ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವಲಯ ಮುಖ್ಯ ಇಂಜನಿಯರ್‌ಗಳು ನಡೆಸಿದ ಲೆವೆಲ್-1 ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪರಿಣಾಮಕಾರಿ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ **ಅತ್ಯುತ್ತಮ ವಲಯ ಮುಖ್ಯ ಇಂಜನಿಯರ್.**

2) ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವೃತ್ತ ಅಧೀಕ್ಷಕ ಇಂಜನಿಯರ್‌ಗಳು ನಡೆಸಿದ ಲೆವೆಲ್-2 ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪರಿಣಾಮಕಾರಿ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ **ಅತ್ಯುತ್ತಮ ವೃತ್ತ ಅಧೀಕ್ಷಕ ಇಂಜನಿಯರ್.**

3) ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ನಡೆಸಿದ ಲೆವೆಲ್-2 ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪರಿಣಾಮಕಾರಿ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ **ಅತ್ಯುತ್ತಮ ವಿಭಾಗೀಯ ಕಾರ್ಯನಿರ್ವಾಹಕ ಇಂಜಿನಿಯರ್.**

4) ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ಪ್ರತಿ ವೃತ್ತ ವ್ಯಾಪ್ತಿಯಲ್ಲಿ ಉಪ-ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಶಾಖಾಧಿಕಾರಿಗಳು ನಡೆಸಿದ ಲೆವೆಲ್-2 ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ. ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ ಅತ್ಯುತ್ತಮ **ಉಪ-ವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಶಾಖಾಧಿಕಾರಿ(ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್).**

5) ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ಪ್ರತಿ ವಿಭಾಗ ವ್ಯಾಪ್ತಿಯಲ್ಲಿ, ಲೆವೆಲ್-2 ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಲು ಸಹಾಯ ಮಾಡಿದಂತಹ ಅತ್ಯುತ್ತಮ **ಮೀಟರ್ ರೀಡರ್ ಮತ್ತು ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್.**

6) ಶ್ಲಾಘನೆ/ಬಹುಮಾನದ ಬಗ್ಗೆ **ಪರಿಗಣಿಸಲು,** ಅನುಕ್ರಮವಾಗಿ ಕಾರ್ಯ ಮತ್ತು ಪಾಲನಾ ಕ್ಷೇತ್ರದಲ್ಲಿನ ಮುಖ್ಯ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್ ರವರುಗಳು **ಆ ತಿಂಗಳಿನಲ್ಲಿ ವಿಧಿಸಲಾದ ದಂಡದ ಮೊತ್ತವು ಅನುಕ್ರಮವಾಗಿ ರೂ. 40.00 ಲಕ್ಷಗಳು, 30.00 ಲಕ್ಷಗಳು, 20.00 ಲಕ್ಷಗಳು, 10.00 ಲಕ್ಷಗಳು ಮತ್ತು 5.00 ಲಕ್ಷಕ್ಕಿಂತ ಕಡಿಮೆಯಿರಬಾರದು.** ಮೀಟರ್ ರೀಡರ್, ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್ ಗಳಿಗೆ ಸಂಬಂಧಿಸಿದಂತೆ ಶ್ಲಾಘನೆ/ಬಹುಮಾನ ನೀಡುವ ಸಲುವಾಗಿ ಪರಿಗಣಿಸಲು, ಇವರುಗಳಿಂದ **ಆ ತಿಂಗಳಿನಲ್ಲಿ** ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪತ್ತೆ ಮಾಡಲಾದ ಪ್ರಕರಣದಲ್ಲಿ ವಿಧಿಸಲಾದ **ದಂಡದ ಮೊತ್ತವು ಅನುಕ್ರಮವಾಗಿ ರೂ.2.00 ಲಕ್ಷ ಮತ್ತು 1.00 ಲಕ್ಷಕ್ಕಿಂತ ಕಡಿಮೆಯಿರಬಾರದು.**

**<u>ಆ) ಕಾರ್ಯ ಮತ್ತು ಪಾಲನಾ ಘಟಕದಲ್ಲಿ ಅನುಸರಿಸಬೇಕಾದ ಆಯ್ಕೆ ವಿಧಾನ:</u>**

7) **ಅತ್ಯುತ್ತಮ ಮುಖ್ಯ ಇಂಜಿನಿಯರ್**- ಎಸ್ಕಾಂಗಳಲ್ಲಿನ ವಲಯ ಮುಖ್ಯ ಇಂಜಿನಿಯರ್‌ಗಳು ಆ ತಿಂಗಳಿನಲ್ಲಿನ ಲೆವೆಲ್-1 ತಪಾಸಣೆಯಲ್ಲಿನ ವಿವರಗಳನ್ನು ಸಂಬಂಧಿಸಿದ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ, ಅತ್ಯುತ್ತಮ ಮುಖ್ಯ ಇಂಜಿನಿಯರ್‌ರನ್ನು ಆಯ್ಕೆ ಮಾಡುವ ಸಲುವಾಗಿ ಈ ತಪಾಸಣೆಯ ವಿವರಗಳನ್ನು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್)ರವರಿಗೆ ಕಳುಹಿಸತಕ್ಕದ್ದು.

8) **ಅತ್ಯುತ್ತಮ ವೃತ್ತ ಅಧೀಕ್ಷಕ ಇಂಜಿನಿಯರ್ ಮತ್ತು ಅತ್ಯುತ್ತಮ ವಿಭಾಗೀಯ ಕಾರ್ಯನಿರ್ವಾಹಕ ಇಂಜಿನಿಯರ್** – ಪ್ರತಿ ವಲಯ ಮುಖ್ಯ ಇಂಜಿನಿಯರ್‌ರವರು ಅತ್ಯುತ್ತಮ ವೃತ್ತ ಅಧೀಕ್ಷಕ ಇಂಜಿನಿಯರ್ ಮತ್ತು ಅತ್ಯುತ್ತಮ ವಿಭಾಗೀಯ ಕಾರ್ಯನಿರ್ವಾಹಕ ಇಂಜಿನಿಯರ್ ರನ್ನು ಅವರ ವಲಯ ವ್ಯಾಪ್ತಿಯಲ್ಲಿ ನಡೆಸಲಾದ ಲೆವೆಲ್-2 ತಪಾಸಣೆಯ ಕಾರ್ಯನಿರ್ವಹಣೆಯ ಆಧಾರದ ಮೇಲೆ ಮತ್ತು ಸಂಬಂಧಪಟ್ಟ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡತಕ್ಕದ್ದು ಮತ್ತು ಆಯ್ಕೆ ಮಾಡಲಾದ ಹೆಸರುಗಳನ್ನು ಆ ತಿಂಗಳಿನಲ್ಲಿ ವಿಧಿಸಲಾದ ದಂಡದ ವಿವರಗಳೊಂದಿಗೆ ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

9) **ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಶಾಖಾಧಿಕಾರಿ (ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್)** – ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಶಾಖಾಧಿಕಾರಿ (ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್) ರವರುಗಳನ್ನು ಅಧೀಕ್ಷಕ ಇಂಜಿನಿಯರ್ ರವರು ಅವರ ವೃತ್ತ ವ್ಯಾಪ್ತಿಯಲ್ಲಿ ನಡೆಸಲಾದ ಲೆವೆಲ್-2 ಕಾರ್ಯನಿರ್ವಹಣೆಯ

....4

ಆಧಾರದ ಮೇಲೆ ಮತ್ತು ಸಂಬಂಧಪಟ್ಟ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡತಕ್ಕದ್ದು ಮತ್ತು ಆಯ್ಕೆ ಮಾಡಲಾದ ಹೆಸರುಗಳನ್ನು ಆ ತಿಂಗಳಿನಲ್ಲಿ ವಿಧಿಸಲಾದ ದಂಡದ ವಿವರಗಳೊಂದಿಗೆ ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

10) **ಅತ್ಯುತ್ತಮ ಮೀಟರ್ ರೀಡರ್ ಮತ್ತು ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್** – ಕಾರ್ಯ ನಿರ್ವಾಹಕ ಇಂಜಿನಿಯರ್‌ಗಳು ಅವರುಗಳ ವಿಭಾಗ ವ್ಯಾಪ್ತಿಯಲ್ಲಿ ನಡೆಸಲಾದ ಲೆವೆಲ್–2 ತಪಾಸಣೆ ಕಾರ್ಯಗಳನ್ನು ಆಧರಿಸಿ ಅತ್ಯುತ್ತಮ ಮೀಟರ್ ರೀಡರ್ ಮತ್ತು ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್‌ರನ್ನು ಸಂಬಂಧಪಟ್ಟ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡತಕ್ಕದ್ದು. ಆಯ್ಕೆ ಮಾಡಿದವರ ಹೆಸರುಗಳನ್ನು ಅವರ ಕಾರ್ಯನಿರ್ವಹಣೆ ವಿವರಗಳೊಂದಿಗೆ ಅಧೀಕ್ಷಕ ಇಂಜಿನಿಯರ್ ರವರಿಗೆ ಕಳುಹಿಸತಕ್ಕದ್ದು. ಅಧೀಕ್ಷಕ ಇಂಜಿನಿಯರ್ ರವರು ಅವರ ವೃತ್ತ ವ್ಯಾಪ್ತಿಯಲ್ಲಿನ ವಿವಿಧ ವಿಭಾಗಗಳಲ್ಲಿ ಆಯ್ಕೆ ಯಾದವರ ಹೆಸರು ಮತ್ತು ವಿಧಿಸಲಾದ ದಂಡದ ವಿವರಗಳನ್ನು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

**ಇ) ಎಸ್ಕಾಂಗಳಲ್ಲಿನ ಎಂ.ಟಿ.ವಿಭಾಗಗಳಿಗೆ ಶ್ಲಾಘನೆ ಮತ್ತು ಬಹುಮಾನ :**

11) **ಅತ್ಯುತ್ತಮ ಅಧೀಕ್ಷಕ ಇಂಜಿನಿಯರ್ (ಎಂ.ಟಿ.) ಮತ್ತು ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್(ಎಂ.ಟಿ)**– ಪ್ರತಿ ಎಸ್ಕಾಂಗಳಲ್ಲಿ ನಡೆಯುವ ಎಂ.ಟಿ. ತಪಾಸಣೆಗಳಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪ್ರಮುಖವಾದ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ **ಅತ್ಯುತ್ತಮ ಅಧೀಕ್ಷಕ ಇಂಜಿನಿಯರ್ (ಎಂ.ಟಿ.) ಮತ್ತು ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್(ಎಂ.ಟಿ).**

12) **ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಂ.ಟಿ.) ಮತ್ತು ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್(ಎಂ.ಟಿ).**– ಎಲ್ಲಾ ಎಸ್ಕಾಂಗಳಲ್ಲಿ ನಡೆಯುವ ಎಂ.ಟಿ. ತಪಾಸಣೆಗಳಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪ್ರಮುಖವಾದ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ ಓರ್ವ ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಂ.ಟಿ.) ಮತ್ತು ಓರ್ವ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್(ಎಂ.ಟಿ).

13) ಎಂ.ಟಿ. ವಿಭಾಗ ವ್ಯಾಪ್ತಿಯಲ್ಲಿ, ಆಯಾಯ ತಿಂಗಳಿನಲ್ಲಿ ನಡೆಸಿದ ಎಂ.ಟಿ. ತಪಾಸಣೆಯಲ್ಲಿ ವಿಭಾಗ ವ್ಯಾಪ್ತಿಯಲ್ಲಿ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಪ್ರಕರಣವನ್ನು ಪತ್ತೆ ಹಚ್ಚಲು ಸಹಾಯ ಮಾಡಿದಂತಹ ಎಂ.ಟಿ.ವಿಭಾಗದಲ್ಲಿನ ಅತ್ಯುತ್ತಮ **ಮೀಟರ್ ರೀಡರ್ ಮತ್ತು ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್.**

14) ಶ್ಲಾಘನೆ/ಬಹುಮಾನದ ಬಗ್ಗೆ **ಪರಿಗಣಿಸಲು,** ಅನುಕ್ರಮವಾಗಿ ಎಂ.ಟಿ. ವಿಭಾಗದಲ್ಲಿನ ಅಧೀಕ್ಷಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್ ರವರುಗಳು **ಆ ತಿಂಗಳಿನಲ್ಲಿ ವಿಧಿಸಲಾದ ದಂಡದ ಮೊತ್ತವು ಅನುಕ್ರಮವಾಗಿ ರೂ. 60.00 ಲಕ್ಷಗಳು, 30.00 ಲಕ್ಷಗಳು, 20.00 ಲಕ್ಷಗಳು, 10.00 ಲಕ್ಷಕ್ಕಿಂತ ಕಡಿಮೆಯಿರಬಾರದು.** ಮೀಟರ್ ರೀಡರ್, ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್‌ಗಳಿಗೆ ಸಂಬಂಧಿಸಿದಂತೆ ಶ್ಲಾಘನೆ/ಬಹುಮಾನವನ್ನು ನೀಡಲು ಪರಿಗಣಿಸುವ ಸಲುವಾಗಿ, ಇವರುಗಳಿಂದ **ಆ ತಿಂಗಳಿನಲ್ಲಿ** ವಿದ್ಯುತ್ ಕಳ್ಳತನ ಮತ್ತು ಸೋರಿಕೆಯಲ್ಲಿ ಪತ್ತೆ ಮಾಡಲಾದ ಪ್ರಕರಣದಲ್ಲಿ ವಿಧಿಸಲಾದ **ದಂಡದ ಮೊತ್ತವು ರೂ.2.00 ಲಕ್ಷಕ್ಕಿಂತ ಕಡಿಮೆಯಿರಬಾರದು.**

**ಈ) ಎಂ.ಟಿ.ವಿಭಾಗದಲ್ಲಿ ಆಯ್ಕೆ ಮಾಡಲು ಅನುಸರಿಸಬೇಕಾದ ವಿಧಾನ:**

15) ಎಲ್ಲಾ ಎಸ್ಕಾಂಗಳಿಂದ **ಅತ್ಯುತ್ತಮ ಅಧೀಕ್ಷಕ ಇಂಜಿನಿಯರ್ (ಎಂ.ಟಿ) ಮತ್ತು ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್ (ಎಂ.ಟಿ)**– ಎಸ್ಕಾಂಗಳಲ್ಲಿನ ಅಧೀಕ್ಷಕ ಇಂಜಿನಿಯರ್ (ಎಂ.ಟಿ) ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ (ಎಂ.ಟಿ)ರವರುಗಳು ಆ ತಿಂಗಳಿನಲ್ಲಿನ ಲೆವೆಲ್–3 ತಪಾಸಣೆಯಲ್ಲಿನ ವಿವರಗಳನ್ನು ಸಂಬಂಧಿಸಿದ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ, ಅತ್ಯುತ್ತಮ ಅಧೀಕ್ಷಕ ಇಂಜಿನಿಯರ್(ಎಂ.ಟಿ) ಮತ್ತು ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್(ಎಂ.ಟಿ)ರವರನ್ನು ಆಯ್ಕೆ ಮಾಡುವ ಸಲುವಾಗಿ ಈ ತಪಾಸಣೆಯ ವಿವರಗಳನ್ನು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್)ರವರಿಗೆ ಕಳುಹಿಸತಕ್ಕದ್ದು.

...5

16) **ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್** (ಎಂ.ಟಿ) **ಮತ್ತು ಅತ್ಯುತ್ತಮ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್**(ಎಂ.ಟಿ) – ಹೆಸ್ಕಾಂ/ಮೆಸ್ಕಾಂ/ಸೆಸ್ಕ್ ನ ವಲಯ ಮುಖ್ಯ ಇಂಜಿನಿಯರ್ ರವರುಗಳು, ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) ರವರು ಮತ್ತು ಜೆಸ್ಕಾಂನ ಅಧೀಕ್ಷಕ ಇಂಜಿನಿಯರ್ (ಎಂ.ಆರ್.ಟಿ) ರವರು ಸಂಬಂಧಪಟ್ಟ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಂ.ಟಿ) ಮತ್ತು ಅತ್ಯುತ್ತಮ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್(ಎಂ.ಟಿ) ರವರನ್ನು ಅವರುಗಳು ಸಂಬಂಧಿಸಿದ ಎಸ್ಕಾಂನಲ್ಲಿ ಲೆವೆಲ್–3 ತಪಾಸಣೆಯಲ್ಲಿ ನಡೆಸಿದ ಕಾರ್ಯದ ಆಧಾರದ ಮೇಲೆ ಆಯ್ಕೆಯನ್ನು ಮಾಡತಕ್ಕದ್ದು. ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗಳ ಹೆಸರನ್ನು ವಿಧಿಸಿದ ದಂಡದ ವಿವರಗಳೊಂದಿಗೆ ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

17) **ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್** (ಎಂ.ಟಿ) – ಎಂ.ಟಿ.ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ರವರು ಸಂಬಂಧಪಟ್ಟ ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಅತ್ಯುತ್ತಮ ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್ ರವರನ್ನು ಅವರುಗಳು ಲೆವೆಲ್–3 ತಪಾಸಣೆ ಕಾರ್ಯದಲ್ಲಿನ ಕಾರ್ಯನಿರ್ವಹಣೆ ಆಧಾರದ ಮೇಲೆ ಆಯ್ಕೆ ಮಾಡತಕ್ಕದ್ದು. ಆಯ್ಕೆಯಾದ ಸಿಬ್ಬಂದಿಗಳ ಹೆಸರನ್ನು ಸಂಬಂಧಪಟ್ಟ ವಿವರಗಳೊಂದಿಗೆ ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಹೆಸ್ಕಾಂ/ಮೆಸ್ಕಾಂ/ಸೆಸ್ಕ್ ನ ವಲಯ ಮುಖ್ಯ ಇಂಜಿನಿಯರ್ ರವರುಗಳು, ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) ರವರು ಮತ್ತು ಜೆಸ್ಕಾಂನ ಅಧೀಕ್ಷಕ ಇಂಜಿನಿಯರ್ (ಎಂ.ಆರ್.ಟಿ) ರವರ ಮೂಲಕ ಕಳುಹಿಸತಕ್ಕದ್ದು.

**ಉ) ಕಾರ್ಯ ಮತ್ತು ಪಾಲನಾ ಹಾಗೂ ಎಂ.ಟಿ. ವಿಭಾಗದಲ್ಲಿ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗಳಿಗೆ ನೀಡಲಾಗುವ ನಗದು ಬಹುಮಾನ:**

| ಕ್ರಮ ಸಂಖ್ಯೆ | ಪದನಾಮ | ನಗದು ಬಹುಮಾನ |
|---|---|---|
| 1. | ಎಲ್ಲಾ ಎಸ್ಕಾಂಗಳಲ್ಲಿನ ಅತ್ಯುತ್ತಮ **ವಲಯ ಮುಖ್ಯ ಇಂಜಿನಿಯರ್** | ರೂ. 10,000/– |
| 2. | ಎಲ್ಲಾ ಎಸ್ಕಾಂಗಳಲ್ಲಿನ ಅತ್ಯುತ್ತಮ ವೃತ್ತ/ಎಂ.ಟಿ. **ಅಧೀಕ್ಷಕ ಇಂಜಿನಿಯರ್** | ರೂ. 8,000/– |
| 3. | ಪ್ರತಿ ಎಸ್ಕಾಂನಲ್ಲಿನ ಕಾರ್ಯ ಮತ್ತು ಪಾಲನಾ ವಿಭಾಗದ ಮತ್ತು ಎಲ್ಲಾ ಎಸ್ಕಾಂಗಳಲ್ಲಿನ ಎಂ.ಟಿ ವಿಭಾಗದ ಅತ್ಯುತ್ತಮ **ಕಾರ್ಯನಿರ್ವಾಹಕ ಇಂಜಿನಿಯರ್** | ರೂ. 6,000/– |
| 4. | ಪ್ರತಿ ವೃತ್ತ ವ್ಯಾಪ್ತಿಯ ಕಾರ್ಯ ಮತ್ತು ಪಾಲನಾ ಮತ್ತು ಪ್ರತಿ ಎಸ್ಕಾಂನ ಎಂ.ಟಿ ವಿಭಾಗದ ಅತ್ಯುತ್ತಮ **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್** | ರೂ. 5,000/– |
| 5. | ಪ್ರತಿ ವೃತ್ತ ವ್ಯಾಪ್ತಿಯ ಕಾರ್ಯ ಮತ್ತು ಪಾಲನಾ ಮತ್ತು ಪ್ರತಿ ಎಸ್ಕಾಂನ ಎಂ.ಟಿ ವಿಭಾಗದ ಅತ್ಯುತ್ತಮ **ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್** | ರೂ. 4,000/– |
| 6. | ಎಲ್ಲಾ ಎಸ್ಕಾಂಗಳಲ್ಲಿನ ಪ್ರತಿ ಕಾರ್ಯ ಮತ್ತು ಪಾಲನಾ ವಿಭಾಗದ ಅತ್ಯುತ್ತಮ **ಮೀಟರ್ ರೀಡರ್** | ರೂ. 3,000/– |
| 7. | ಪ್ರತಿ ಕಾರ್ಯ ಮತ್ತು ಪಾಲನಾ ಮತ್ತು ಎಂ.ಟಿ. ವಿಭಾಗದ ಅತ್ಯುತ್ತಮ **ಮೆಕಾನಿಕ್/ಲೈನ್‌ಮನ್/ಸಹಾಯಕ ಲೈನ್‌ಮನ್** | ರೂ. 2,000/– |

**ಊ) ಎಸ್ಕಾಂಗಳಲ್ಲಿನ ಜಾಗೃತದಳ ಘಟಕದವರಿಗೆ ಶ್ಲಾಘನೆ ಮತ್ತು ಬಹುಮಾನ:**

18) ಎಲ್ಲಾ ಎಸ್ಕಾಂಗಳಲ್ಲಿನ ಅತ್ಯುತ್ತಮ **ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು** ಮತ್ತು **ಕಾರ್ಯನಿರ್ವಾಹಕ ಇಂಜಿನಿಯರ್** – ಜಾಗೃತದಳ ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪರಿಣಾಮಕಾರಿ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ ಅತ್ಯುತ್ತಮ ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್.

....6

19) ಪ್ರತಿ ಎಸ್ಕಾಂಗಳಲ್ಲಿನ ಅತ್ಯುತ್ತಮ **ಪೊಲೀಸ್** ನಿರೀಕ್ಷಕ, ಅತ್ಯುತ್ತಮ **ಪೊಲೀಸ್** ಉಪ ನಿರೀಕ್ಷಕ, ಅತ್ಯುತ್ತಮ **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್** ಮತ್ತು ಅತ್ಯುತ್ತಮ **ಸಹಾಯಕ ಇಂಜಿನಿಯರ್**, ಜಾಗೃತದಳ-ಜಾಗೃತದಳ ತಪಾಸಣೆಯಲ್ಲಿ ಆಯಾಯ ತಿಂಗಳಿನಲ್ಲಿ ಬೃಹತ್ ಪ್ರಮಾಣದ ಪರಿಣಾಮಕಾರಿ ಹಾಗೂ ಬೃಹತ್ ಮೊತ್ತದ ದಂಡ ವಿಧಿಸಲಾದಂತಹ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣವನ್ನು ಪತ್ತೆ ಹಚ್ಚಿದ ಅತ್ಯುತ್ತಮ **ಪೊಲೀಸ್ ನಿರೀಕ್ಷಕ**, ಅತ್ಯುತ್ತಮ **ಪೊಲೀಸ್ ಉಪ ನಿರೀಕ್ಷಕ**, ಅತ್ಯುತ್ತಮ **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್** ಮತ್ತು ಅತ್ಯುತ್ತಮ **ಸಹಾಯಕ ಇಂಜಿನಿಯರ್,**

20) ಪ್ರತಿ ಎಸ್ಕಾಂನಲ್ಲಿನ ಓರ್ವ ಅತ್ಯುತ್ತಮ **ಪೊಲೀಸ್ ಮುಖ್ಯ ಪೇದೆ,** ಜಾಗೃತದಳ ಮತ್ತು ಪ್ರತಿ ಜಾಗೃತದಳ ಪೊಲೀಸ್ ಠಾಣೆಯಲ್ಲಿನ ಓರ್ವ ಅತ್ಯುತ್ತಮ **ಪೊಲೀಸ್ ಪೇದೆ**-ಜಾಗೃತದಳ ತಪಾಸಣೆಯು ಪ್ರಗತಿದಾಯಕವಾಗಿ ನಡೆಯಲು ಹೆಚ್ಚಿನ ಮಾಹಿತಿ ಒದಗಿಸಿದಂತಹವರು ಹಾಗೂ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗ ಪ್ರಕರಣದಲ್ಲಿ ಹೆಚ್ಚಿನ ದಂಡ ವಿಧಿಸಲು ಕಾರಣವಾದ **ಅತ್ಯುತ್ತಮ ಪೊಲೀಸ್ ಮುಖ್ಯ ಪೇದೆ ಮತ್ತು ಅತ್ಯುತ್ತಮ ಪೊಲೀಸ್ ಪೇದೆ.**

21) ಶ್ಲಾಘನೆ/ಬಹುಮಾನದ ಬಗ್ಗೆ ಪರಿಗಣಿಸಲು, ಅನುಕ್ರಮವಾಗಿ ಪೊಲೀಸ್ ಅಧೀಕ್ಷಕರು/ಕಾರ್ಯನಿರ್ವಾಹಕ ಇಂಜಿನಿಯರ್/ಪೊಲೀಸ್ ಉಪಾಧೀಕ್ಷಕರು, ಪೊಲೀಸ್ ನಿರೀಕ್ಷಕರು/ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಪೊಲೀಸ್ ಉಪ ನಿರೀಕ್ಷಕರು/ಸಹಾಯಕ ಇಂಜಿನಿಯರ್, ಜಾಗೃತದಳ ರವರು ಒಂದು ತಿಂಗಳಿನಲ್ಲಿ ವಿಧಿಸಲಾದ **ದಂಡದ ಮೊತ್ತವು ಅನುಕ್ರಮವಾಗಿ ರೂ. 50.00 ಲಕ್ಷಗಳು, 20.00 ಲಕ್ಷಗಳು, 10.00 ಲಕ್ಷಕ್ಕಿಂತ ಕಡಿಮೆಯಿರಬಾರದು.** ಪೊಲೀಸ್ ಮುಖ್ಯ ಪೇದೆ ಮತ್ತು ಪೊಲೀಸ್ ಪೇದೆಗಳಿಗೆ ಸಂಬಂಧಿಸಿದಂತೆ ಶ್ಲಾಘನೆ/ಬಹುಮಾನವನ್ನು ನೀಡಲು ಪರಿಗಣಿಸುವ ಸಲುವಾಗಿ, ಇವರುಗಳು ಒಂದು **ತಿಂಗಳಿನಲ್ಲಿ** ವಿದ್ಯುತ್ ಕಳ್ಳತನ ಮತ್ತು ಸೋರಿಕೆಯಲ್ಲಿ ಪತ್ತೆ ಮಾಡಲಾದ ಪ್ರಕರಣದಲ್ಲಿ ವಿಧಿಸಲಾದ **ದಂಡದ ಮೊತ್ತವು ಕ್ರಮವಾಗಿ ರೂ.2.00 ಲಕ್ಷ ಮತ್ತು ರೂ.1.00 ಲಕ್ಷಕ್ಕಿಂತ ಕಡಿಮೆಯಿರಬಾರದು.**

**ಖ) ಜಾಗೃತದಳದಲ್ಲಿ ಆಯ್ಕೆ ಮಾಡಲು ಅನುಸರಿಸಬೇಕಾದ ವಿಧಾನ:**

22) **ಅತ್ಯುತ್ತಮ ಪೊಲೀಸ್ ಅಧೀಕ್ಷಕರು, ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಪೊಲೀಸ್ ಉಪಾಧೀಕ್ಷಕರು**-ಇವರುಗಳು ಆ ತಿಂಗಳಿನಲ್ಲಿ ಜಾಗೃತದಳ ತಪಾಸಣೆಗಳಲ್ಲಿ ಮಾಡಿರುವ ಕಾರ್ಯವನ್ನು ಆಧಾರವಾಗಿಟ್ಟುಕೊಂಡು, ಇವರ ಆಯ್ಕೆಯನ್ನು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರು ಮಾಡತಕ್ಕದ್ದು.

23) **ಅತ್ಯುತ್ತಮ ಪೊಲೀಸ್** ನಿರೀಕ್ಷಕರು, **ಅತ್ಯುತ್ತಮ ಪೊಲೀಸ್** ಉಪ ನಿರೀಕ್ಷಕರು**(ಜಾಗೃತದಳ), ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಸಹಾಯಕ ಇಂಜಿನಿಯರ್, ಜಾಗೃತದಳ** – ಪೊಲೀಸ್ ಅಧೀಕ್ಷಕರು, ಜಾಗೃತದಳ/ ಪೊಲೀಸ್ ಉಪಾಧೀಕ್ಷಕರು, ಜಾಗೃತದಳ (ಸೆಸ್ಕ್, ಮೈಸೂರಿಗೆ ಸಂಬಂಧಿಸಿದಂತೆ) ಇವರುಗಳು ಅತ್ಯುತ್ತಮ ಪೊಲೀಸ್ ನಿರೀಕ್ಷಕರು, ಅತ್ಯುತ್ತಮ ಪೊಲೀಸ್ ಉಪ ನಿರೀಕ್ಷಕರು(ಜಾಗೃತದಳ), ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಅತ್ಯುತ್ತಮ ಸಹಾಯಕ ಇಂಜಿನಿಯರ್ (ಜಾಗೃತದಳ) ರವರನ್ನು ಜಾಗೃತದಳ ತಪಾಸಣೆಯಲ್ಲಿ ಇವರುಗಳು ಮಾಡಿರುವ ಕಾರ್ಯವನ್ನು ಪರಿಗಣನೆಗೆ ತೆಗೆದುಕೊಂಡು ಎಲ್ಲಾ ಎಸ್ಕಾಂಗಳಲ್ಲಿ ಒಬ್ಬರನ್ನು ಆಯ್ಕೆ ಮಾಡತಕ್ಕದ್ದು. ಆಯ್ಕೆಯಾದವರ ಹೆಸರುಗಳನ್ನು ಜಾಗೃತದಳ ತಪಾಸಣೆಯಲ್ಲಿ ವಿಧಿಸಿದ ದಂಡಗಳ ವಿವರಗಳೊಂದಿಗೆ ಪೊಲೀಸ್ ಮಹಾನಿರೀಕ್ಷಕರು, (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

24) **ಅತ್ಯುತ್ತಮ ಪೊಲೀಸ್** ಮುಖ್ಯ ಪೇದೆ ಮತ್ತು **ಪೊಲೀಸ್ ಪೇದೆ** – ಪೊಲೀಸ್ ಅಧೀಕ್ಷಕರು, ಜಾಗೃತದಳ/ ಪೊಲೀಸ್ ಉಪಾಧೀಕ್ಷಕರು, ಜಾಗೃತದಳ (ಸೆಸ್ಕ್, ಮೈಸೂರಿಗೆ ಸಂಬಂಧಿಸಿದಂತೆ) ಇವರುಗಳು ಪ್ರತಿ ಎಸ್ಕಾಂನಿಂದ ಓರ್ವ ಅತ್ಯುತ್ತಮ ಪೊಲೀಸ್ ಮುಖ್ಯ ಪೇದೆ ಮತ್ತು ಪ್ರತಿ ಜಾಗೃತದಳ ಪೊಲೀಸ್ ಠಾಣೆಯಿಂದ ಓರ್ವ ಅತ್ಯುತ್ತಮ ಪೊಲೀಸ್ ಪೇದೆಗಳನ್ನು ಅವರುಗಳು ಜಾಗೃತದಳದ ತಪಾಸಣೆಗಳಲ್ಲಿ ತೋರಿರುವ ಕಾರ್ಯವನ್ನು ಗಮನದಲ್ಲಿರಿಸಿಕೊಂಡು ಆಯ್ಕೆ ಮಾಡತಕ್ಕದ್ದು. ಆಯ್ಕೆಯಾದ ಪೊಲೀಸ್ ಮುಖ್ಯ ಪೇದೆ ಮತ್ತು ಪೇದೆಗಳ ಹೆಸರುಗಳನ್ನು ಪೊಲೀಸ್ ಮಹಾನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು.

25. ಜಾಗೃತದಳ ಘಟಕದಲ್ಲಿ ಆಯ್ಕೆಯಾದವರಿಗೆ ನೀಡಲಾಗುವ ನಗದು ಬಹುಮಾನ:

| ಕ್ರಮ ಸಂಖ್ಯೆ | ಪದನಾಮ | ನಗದು ಬಹುಮಾನ |
|---|---|---|
| 1. | ಅತ್ಯುತ್ತಮ ಪೊಲೀಸ್ ಅಧೀಕ್ಷಕರು | ರೂ. 10,000/- |
| 2. | ಅತ್ಯುತ್ತಮ ಪೊಲೀಸ್ ಉಪಾಧೀಕ್ಷಕರು | ರೂ. 8,000/- |
| 3. | ಅತ್ಯುತ್ತಮ ಕಾರ್ಯನಿರ್ವಾಹಕ ಇಂಜಿನಿಯರ್, ಜಾಗೃತದಳ | ರೂ. 8,000/- |
| 4. | ಅತ್ಯುತ್ತಮ ಪೊಲೀಸ್ ನಿರೀಕ್ಷಕರು | ರೂ. 6,000/- |
| 5. | ಅತ್ಯುತ್ತಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | ರೂ. 6,000/- |
| 6. | ಅತ್ಯುತ್ತಮ ಸಹಾಯಕ ಇಂಜಿನಿಯರ್ | ರೂ. 4,000/- |
| 7. | ಅತ್ಯುತ್ತಮ ಪೊಲೀಸ್ ಉಪ ನಿರೀಕ್ಷಕರು | ರೂ. 4,000/- |
| 8. | ಅತ್ಯುತ್ತಮ ಪೊಲೀಸ್ ಮುಖ್ಯ ಪೇದೆ | ರೂ. 3,000/- |
| 9. | ಅತ್ಯುತ್ತಮ ಪೊಲೀಸ್ ಪೇದೆ | ರೂ. 2,000/- |

**ಖೂ) ಪ್ರಮುಖ ಗುಣಮಟ್ಟದ ವಿದ್ಯುತ್ ಕಳ್ಳತನ ಮತ್ತು ಸೋರಿಕೆ ಪ್ರಕರಣಗಳ ಪತ್ತೆಗಾಗಿ ನಗದು ಬಹುಮಾನ:**

26) ಅಧಿಕಾರಿ/ಸಿಬ್ಬಂದಿಗಳನ್ನು ಉತ್ತೇಜಿಸುವ ಮತ್ತು ಶ್ಲಾಘಿಸುವ ಸಲುವಾಗಿ, ಗುಣಮಟ್ಟದ ವಿದ್ಯುತ್ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲು ಯಾರು ಹೆಚ್ಚಿನ ಮತ್ತು ಉತ್ತಮ ಪ್ರಯತ್ನ ಮಾಡಿರುತ್ತಾರೋ, ಎಲ್ಲಾ ಘಟಕದಲ್ಲಿನ ಅಂದರೆ, ಕಾರ್ಯ ಮತ್ತು ಪಾಲನಾ, ಎಂ.ಟಿ ಮತ್ತು ಜಾಗೃತದಳದಲ್ಲಿರುವವರಿಗೆ ನಗದು ಬಹುಮಾನ ನೀಡುವ ಒಂದು ಯೋಜನೆಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ. ಈ ಬಹುಮಾನವು ಪ್ರಮುಖವಾದ ಗುಣಮಟ್ಟದ ವಿದ್ಯುತ್ ಕಳ್ಳತನವನ್ನು ಯಾರು ಪತ್ತೆ ಮಾಡುತ್ತಾರೋ, ಅಂತಹವರಿಗೆ ಆ ತಿಂಗಳಿನಲ್ಲಿ ನೀಡುವ ಕಾರ್ಯಪ್ರಗತಿಯ ಬಹುಮಾನವಲ್ಲದೇ, ಈ ಬಹುಮಾನವನ್ನು ಸಹ ನೀಡಲಾಗುವುದು.

27) ನಗದು ಬಹುಮಾನಕ್ಕೆ ಅನುಸರಿಸಬೇಕಿರುವ ಮಾನದಂಡ:

| ಮಾನದಂಡ | ತಪಾಸಣೆ ತಂಡಕ್ಕೆ ನಗದು ಬಹುಮಾನ |
|---|---|
| 1) ವಿಧಿಸಲಾದ ಹಿಂಬಿಲ್ಲು > ರೂ, 10.00 ಲಕ್ಷಗಳು < 20.00 ಲಕ್ಷಗಳು | ರೂ.10,000/- |
| 2) ವಿಧಿಸಲಾದ ಹಿಂಬಿಲ್ಲು > ರೂ, 20.00 ಲಕ್ಷಗಳು < 30.00 ಲಕ್ಷಗಳು | ರೂ.20,000/- |
| 3) ವಿಧಿಸಲಾದ ಹಿಂಬಿಲ್ಲು > ರೂ, 30.00 ಲಕ್ಷಗಳು < 40.00 ಲಕ್ಷಗಳು | ರೂ.30,000/- |
| 4) ವಿಧಿಸಲಾದ ಹಿಂಬಿಲ್ಲು > ರೂ, 40.00 ಲಕ್ಷಗಳು < 50.00 ಲಕ್ಷಗಳು | ರೂ.40,000/- |
| 5) ವಿಧಿಸಲಾದ ಹಿಂಬಿಲ್ಲು > ರೂ, 50.00 ಲಕ್ಷಗಳು < 60.00 ಲಕ್ಷಗಳು | ರೂ.50,000/- |
| 6) ವಿಧಿಸಲಾದ ಹಿಂಬಿಲ್ಲು > ರೂ, 60.00 ಲಕ್ಷಗಳು < 70.00 ಲಕ್ಷಗಳು | ರೂ.60,000/- |
| 7) ವಿಧಿಸಲಾದ ಹಿಂಬಿಲ್ಲು > ರೂ, 70.00 ಲಕ್ಷಗಳು < 80.00 ಲಕ್ಷಗಳು | ರೂ.70,000/- |
| 8) ವಿಧಿಸಲಾದ ಹಿಂಬಿಲ್ಲು > ರೂ, 80.00 ಲಕ್ಷಗಳು < 90.00 ಲಕ್ಷಗಳು | ರೂ.80,000/- |
| 9) ವಿಧಿಸಲಾದ ಹಿಂಬಿಲ್ಲು > ರೂ, 90.00 ಲಕ್ಷಗಳು < 100.00 ಲಕ್ಷಗಳು | ರೂ.90,000/- |
| 10) ವಿಧಿಸಲಾದ ಹಿಂಬಿಲ್ಲು > ರೂ,100.00 ಲಕ್ಷಗಳು | ರೂ.1,00,000/- |

**ಸೂಚನೆ:** ಗುಣಮಟ್ಟದ ವಿದ್ಯುತ್ ಕಳ್ಳತನ ಪತ್ತೆಗಾಗಿ ನೀಡುವ ನಗದು ಬಹುಮಾನವನ್ನು ಆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿಸಿರುವ ಹಿಂಬಿಲ್ಲಿನ ಮೊತ್ತ ಶೇಕಡ 50ರಷ್ಟು ಮೊತ್ತವು ವಸೂಲಾದ ನಂತರ ನೀಡುವುದು.

28) ಕಾರ್ಯ ಮತ್ತು ಪಾಲನಾ, ಎಂ.ಟಿ ಮತ್ತು ಜಾಗೃತದಳದ ಅಧಿಕಾರಿಗಳಿಂದ ವಿಶೇಷವಾದ ಸಾಧನೆಗಾಗಿ ನೀಡುವ ಮೇಲೆ ಹೇಳಿರುವ ನಗದು ಬಹುಮಾನವಲ್ಲದೇ, ಕಾರ್ಯ ಮತ್ತು ಪಾಲನಾ, ಎಂ.ಟಿ., ಜಾಗೃತದಳ ಅಥವಾ ಕವಿಪ್ರನಿನಿ ಅಥವಾ ಕವಿಪ್ರನಿನಿ, ಎಸ್ಕಾಂಗಳ ಲೆಕ್ಕ ಘಟಕ ಅಥವಾ ಸ್ಥಳೀಯ ಪೊಲೀಸ್ ಅಥವಾ ಖಾಸಗಿ ವ್ಯಕ್ತಿಗಳು ಇತ್ಯಾದಿ ಗಳಿಂದ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಅಸಾಧಾರಣ ಪ್ರಕರಣವನ್ನು ಪತ್ತೆ ಮಾಡಿದ ಸಂದರ್ಭದಲ್ಲಿ ಅಥವಾ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಪ್ರಕರಣ ಪತ್ತೆ

....8

ಮಾಡುವ ಸಲುವಾಗಿ ವಿಶೇಷವಾದ ತನಿಖೆ ಅಥವಾ ವಿಚಾರಣೆಯನ್ನು ನಡೆಸಿದ ಸಂದರ್ಭದಲ್ಲು ಸಹ ನಗದು ಬಹುಮಾನ ನೀಡಲಾಗುವುದು. ಈ ರೀತಿಯ ಅಸಾಧಾರಣ ಪ್ರಕರಣಗಳಲ್ಲಿ ಸೂಕ್ತವಾದ ಬಹುಮಾನವನ್ನು ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಪೋರ್ಸ್‌ಮೆಂಟ್) ರವರಿಂದ ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ನೀಡಲಾಗುವುದು. ಎಲ್ಲಿ ಪ್ರಕರಣ ಪತ್ತೆ/ತನಿಖೆ ಯಾಗುವುದೋ, ಅಂತಹ ಸಂದರ್ಭದಲ್ಲಿ ಈ ಬಹುಮಾನದ ಮೊತ್ತವನ್ನು ಸಂಬಂಧಪಟ್ಟ ಎಸ್ಕಾಂನಿಂದ ಪಾವತಿಸುವುದು.

29) ಮೇಲೆ ತಿಳಿಸಿರುವ ರೀತಿಯ ಅಸಾಧಾರಣ ಪ್ರಕರಣಗಳಲ್ಲಿ, ಪ್ರತಿ ಪ್ರಕರಣಕ್ಕೆ ನೀಡಲಾಗುವ ನಗದು ಬಹುಮಾನವು ರೂ.50,000/-ಕ್ಕಿಂತ ಹೆಚ್ಚಿರಬಾರದು ಮತ್ತು ಪ್ರತಿ ವ್ಯಕ್ತಿಗೆ ರೂ.10,000/-ಕ್ಕಿಂತ ಹೆಚ್ಚಿರಕೂಡದು.

30) ಪೊಲೀಸ್ ಮಹಾ ನಿರೀಕ್ಷಕರು (ಜಾಗೃತದಳ ಮತ್ತು ಎನ್‌ಪೋರ್ಸ್‌ಮೆಂಟ್) ರವರು ಪ್ರತಿ ತಿಂಗಳು ಈ ಹಿಂದೆ ಗೊತ್ತುಪಡಿಸಿರುವ ಲೆವೆಲ್-1, ಲೆವೆಲ್-2, ಲೆವೆಲ್-3 ಮತ್ತು ಜಾಗೃತದಳ ತಪಾಸಣೆಗಳಿಗೆ ಸಂಬಂಧಿಸಿದ ವಿವರಗಳನ್ನು ಸ್ವೀಕರಿಸಿದ ನಂತರ, ಎಸ್ಕಾಂಗಳಲ್ಲಿ ವಿದ್ಯುತ್ ಕಳ್ಳತನ ಮತ್ತು ಸೋರಿಕೆಯಲ್ಲಿನ ವಿಶೇಷವಾದ ಪಲಿತಾಂಶಗಳ ಸಾಧನೆಗಾಗಿ ಆಯ್ಕೆಯಾದ ಕಾರ್ಯ ಮತ್ತು ಪಾಲನಾ, ಎಂ.ಟಿ ಮತ್ತು ಜಾಗೃತದಳ ಅಧಿಕಾರಿಗಳಿಗೆ ಶ್ಲಾಘನೆ ಮತ್ತು ಬಹುಮಾನದ ಪಟ್ಟಿಯನ್ನು ಪ್ರಕಟಿಸುವುದು ಮತ್ತು ಆಯ್ಕೆಯಾದವರಿಗೆ ಶ್ಲಾಘನೀಯ ಪತ್ರವನ್ನು ಸಹ ನೀಡುವುದು. ಎಸ್ಕಾಂಗಳಲ್ಲಿನ ಎಲ್ಲಾ ಅಧಿಕಾರಿಗಳು ಲೆವೆಲ್-1, ಲೆವೆಲ್-2, ಲೆವೆಲ್-3 ಮತ್ತು ಜಾಗೃತದಳ ತಪಾಸಣೆಗಳ ವಿವರಗಳನ್ನು ಪೊಲೀಸ್ ಮಹಾನಿರೀಕ್ಷಕರು(ಜಾಗೃತದಳ ಮತ್ತು ಎನ್‌ಪೋರ್ಸ್‌ಮೆಂಟ್) ರವರಿಗೆ ಪ್ರತಿ ತಿಂಗಳ ಮೊದಲನೇ ವಾರದೊಳಗಾಗಿ ಕಳುಹಿಸತಕ್ಕದ್ದು. ತಡವಾಗಿ ಬಂದ ತಪಾಸಣೆ ವಿವರಗಳನ್ನು ಶ್ಲಾಘನೆ ಮತ್ತು ಬಹುಮಾನದ ಆಯ್ಕೆಗಾಗಿ ಪರಿಗಣಿಸಲಾಗುವುದಿಲ್ಲ.

31) ಆಯ್ಕೆಯಾದ ಅಧಿಕಾರಿಗಳ ಪಟ್ಟಿಯನ್ನು ಪೊಲೀಸ್ ಮಹಾನಿರೀಕ್ಷಕರು ಪ್ರಕಟಿಸಿದ ನಂತರ, ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು ಪೊಲೀಸ್ ಮಹಾನಿರೀಕ್ಷಕರಿಂದ ಪಟ್ಟಿಯನ್ನು ಪ್ರಕಟಿಸಿದ 30ದಿನಗಳೊಳಗಾಗಿ ನಗದು ಬಹುಮಾನವನ್ನು ಪಾವತಿಸುವ ಸಲುವಾಗಿ ಶೀಘ್ರ ವ್ಯವಸ್ಥೆಯನ್ನು ಮಾಡತಕ್ಕದ್ದು.

32) ವಿಶೇಷ ಸಾಧನೆಗಾಗಿ ಆಯ್ಕೆಯಾದ ಅಧಿಕಾರಿಗಳಿಗೆ ಪ್ರತಿ ತಿಂಗಳು ಪ್ರತಿ ಎಸ್ಕಾಂನ ಕಾರ್ಪೋರೇಟ್ ಕಚೇರಿಯಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಿ ಸನ್ಮಾನಿಸತಕ್ಕದ್ದು. ಎಸ್ಕಾಂನ ವ್ಯವಸ್ಥಾಪಕ ನಿರ್ದೇಶಕರುಗಳು ವಿವಿಧ ಅಧಿಕಾರಿಗಳಿಗೆ ನಗದು ಬಹುಮಾನವನ್ನು ವಿತರಿಸಿದ ವಿವರಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ ಮತ್ತು ಅಧ್ಯಕ್ಷರು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಪೊಲೀಸ್ ಮಹಾನಿರೀಕ್ಷಕರು(ಜಾಗೃತದಳ ಮತ್ತು ಎನ್‌ಪೋರ್ಸ್‌ಮೆಂಟ್) ರವರಿಗೆ ಕಳುಹಿಸತಕ್ಕದ್ದು. ಈ ವಿಷಯದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರುಗಳು ವೈಯಕ್ತಿಕ ಆಸಕ್ತಿಯನ್ನು ವಹಿಸುವಂತೆ ತಿಳಿಸಿದೆ.

**32) ಉತ್ತಮ ಸೇವೆ ಸಲ್ಲಿಸಿದ ಅಧಿಕಾರಿ/ಸಿಬ್ಬಂದಿಗಳ ಸೇವಾ ದಾಖಲೆ/ಸೇವಾ ಪುಸ್ತಕದಲ್ಲಿ ಉತ್ತಮ ಸೇವೆಯ ವಿವರವನ್ನು ದಾಖಲಿಸತಕ್ಕದ್ದು.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಜಿ. ಸಂಪತ್ ಕುಮಾರ್) 23/3/09
ಸರ್ಕಾರದ ಅಧೀನ ಕಾರ್ಯದರ್ಶಿ,
ಪ್ರಭಾರಿ ಇಂಧನ ಇಲಾಖೆ,
☎ 22034674.

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ರವರಿಗೆ ಪ್ರಕಟಣೆಗಾಗಿ ಮತ್ತು 25 ಪ್ರತಿಗಳನ್ನು ಇಲಾಖೆಗೆ ಸರಬರಾಜು ಮಾಡುವಂತೆ ಕೋರಿದೆ.

ಪ್ರತಿ:

1) ಕರ್ನಾಟಕ ಮಹಾಲೇಖಪಾಲರು (ಎ ಮತ್ತು ಇ)/(ಆಡಿಟ್–1)/(ಆಡಿಟ್–2).
2) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5) ಪೊಲೀಸ್ ಮಹಾನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್), ಕವಿಪ್ರನಿನಿ ಮತ್ತು ಎಸ್ಕಾಂಗಳು, ಕಾವೇರಿ ಭವನ, ಬೆಂಗಳೂರು.
6) ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ.ರಸ್ತೆ, ಬೆಂಗಳೂರು.
7) ನಿಯಂತ್ರಣಾಧಿಕಾರಿಗಳು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರುಗಳು, ಬೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಜೆಸ್ಕಾಂ/ಸೆಸ್ಕ್.
10) ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಶುಗರ್ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು.
11) ವಿಶೇಷಾಧಿಕಾರಿಗಳು (ಸುಧಾರಣೆ)/ಕಾರ್ಯನಿರ್ವಾಹಕ ಇಂಜಿನಿಯರ್(ಯೋಜನೆಗಳು)/ಇ.ಎಂ.ಸಿ–1 /ಇ.ಎಂ.ಸಿ–2, ಇಂಧನ ಇಲಾಖೆ.
12) ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
13) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.
14) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ಬೆಂಗಳೂರು.
15) ಎಲ್ಲಾ ಶಾಖಾಧಿಕಾರಿಗಳು, ಇಂಧನ ಇಲಾಖೆ.
16) ಶಾಖಾ ರಕ್ಷ ಕಡತ/ಹೆಚ್ಚಿನ ಪ್ರತಿಗಳು/ಕಚೇರಿ ಪ್ರತಿ

ಪ್ರತಿ:

1) ಕರ್ನಾಟಕ ಮಹಾಲೇಖಪಾಲರು (ಎ ಮತ್ತು ಇ)/(ಆಡಿಟ್-1)/(ಆಡಿಟ್-2).
2) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5) ಪೊಲೀಸ್ ಮಹಾನಿರೀಕ್ಷಕರು (ಜಾಗೃತದಳ ಮತ್ತು ಎನ್‌ಫೋರ್ಸ್‌ಮೆಂಟ್), ಕವಿಪ್ರನಿನಿ ಮತ್ತು ಎಸ್ಕಾಂಗಳು, ಕಾವೇರಿ ಭವನ, ಬೆಂಗಳೂರು.
6) ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ.ರಸ್ತೆ, ಬೆಂಗಳೂರು.
7) ನಿಯಂತ್ರಣಾಧಿಕಾರಿಗಳು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರುಗಳು, ಬೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಜೆಸ್ಕಾಂ/ಸೆಸ್ಕ್.
10) ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಶುಗರ್ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು.
11) ವಿಶೇಷಾಧಿಕಾರಿಗಳು (ಸುಧಾರಣೆ)/ಕಾರ್ಯನಿರ್ವಾಹಕ ಇಂಜಿನಿಯರ್(ಯೋಜನೆಗಳು)/ಇ.ಎಂ.ಸಿ-1 /ಇ.ಎಂ.ಸಿ-2, ಇಂಧನ ಇಲಾಖೆ.
12) ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
13) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.
14) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ಬೆಂಗಳೂರು.
15) ಎಲ್ಲಾ ಶಾಖಾಧಿಕಾರಿಗಳು, ಇಂಧನ ಇಲಾಖೆ.
16) ಶಾಖಾ ರಕ್ಷ ಕಡತ/ಹೆಚ್ಚಿನ ಪ್ರತಿಗಳು/ಕಚೇರಿ ಪ್ರತಿ